146ಶ್ರೀ 60ಶ್ರೀ ನಿ-72 ಕ್ರ-150

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ಇವರು ನಿಯಮ 72ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ

* * * * *

ವಿಷಯ:

ವಸತಿ ಬಡಾವಣೆ ಮನೆಗಳ ಸುತ್ತಮುತ್ತ ಶಬ್ದಮಾಲಿನ್ಯ ಹಾಗೂ ಪರಿಸರ ಮಾಲಿನ್ಯವನ್ನು ಉಂಟು ಮಾಡುವ ವಾಣಿಜ್ಯ ವ್ಯವಹಾರ ನಡೆಸುವುದು ಹಾಗೂ ಫುಟ್‌ಪಾತ್ ಒತ್ತುವರಿ ಮಾಡಿಕೊಂಡು ಅಂಗಡಿ ನಡೆಸುವುದು ಕಾನೂನು ಬಾಹಿರವಾಗಿದ್ದರೂ ಬಿ.ಬಿ.ಎಂ.ಪಿ., 42ನೇ ವಾರ್ಡಿಗೆ ಸೇರಿದ 3ನೇ ಅಡ್ಡರಸ್ತೆ ನಿವೇಶನ ಸಂಖ್ಯೆ: 78, ಲಗ್ಗೇರೆ ವಿಧಾನಸೌಧ ಬಡಾವಣೆಯಲ್ಲಿನ ಒಂದು ಶೆಡ್‌ನಲ್ಲಿ ಕೋಳಿ ಅಂಗಡಿ ನಡೆಸಲು ಬಿ.ಬಿ.ಎಂ.ಪಿ. ಆರೋಗ್ಯ ಇಲಾಖೆಯವರು ಅನುಮತಿ ನೀಡಿರುವುದರಿಂದ ಸದರಿ ಅಂಗಡಿಯ ಸುತ್ತಮುತ್ತಲ ಮನೆಗಳ ನಿವಾಸಿಗಳಿಗೆ ಶಬ್ದಮಾಲಿನ್ಯ ಹಾಗೂ ಕೋಳಿ ಅಂಗಡಿಯ ದುರ್ವಾಸನೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಖಾಸಗಿ ಕಂಪನಿ ಕೆಲಸಗಾರರು ಮನೆಯಿಂದ ಕೆಲಸ ಮಾಡಲು, ಹಿರಿಯ ನಾಗರೀಕರು ಹಾಗೂ ಇತರರು ನೆಮ್ಮದಿಯಿಂದ ಮನೆಗಳಲ್ಲಿ ವಾಸಿಸಲು ತುಂಬಾ ತೊಂದರೆಯುಂಟಾಗಿರುತ್ತದೆ. ಮೇಲ್ಕಂಡ ಅಂಗಡಿಯವರು ರಸ್ತೆಯ ಫುಟ್‌ಪಾತ್ ಅನ್ನು ಆಕ್ರಮಿಸಿಕೊಂಡು ಕೋಳಿಗಳನ್ನು ಇಡುತ್ತಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವುದರ ಜೊತೆಗೆ ಸದರಿ ದುರ್ವಾಸನೆಯಿಂದ ಸಂಚರಿಸಲು ಸಹ ತೊಂದರೆ ಆಗಿರುತ್ತದೆ ಹಾಗೂ ಇದರಿಂದಾಗಿ ಈ ಬಡಾವಣೆಯಲ್ಲಿ ಬೀದಿನಾಯಿಗಳ ಹಾವಳಿಯು ತುಂಬಾ ಹೆಚ್ಚಾಗಿರುತ್ತದೆ.

ಆದುದರಿಂದ, ಬಿ.ಬಿ.ಎಂ.ಪಿ.ಯ ಸಂಬಂಧಿಸಿದ ಮೇಲಾಧಿಕಾರಿಗಳು ಕೂಡಲೇ ಸದರಿ ಲೈಸೆನ್ಸ್ ರದ್ದುಪಡಿಸಿ ವಾಣಿಜ್ಯ ಪ್ರದೇಶಕ್ಕೆ ಇದನ್ನು ವರ್ಗಾಯಿಸಿ, ನಾಗರೀಕರು ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ಶಬ್ದಮಾಲಿನ್ಯ, ಪರಿಸರ ಮಾಲಿನ್ಯ, ಫುಟ್‌ಪಾತ್ ಒತ್ತುವರಿಯಿಂದ ಆಗುತ್ತಿರುವ ತೊಂದರೆಗಳನ್ನು ಕೂಡಲೇ ನಿವಾರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 42ರ ನಿವೇಶನ ಸಂಖ್ಯೆ: 78ರಲ್ಲಿ ಮಾತೃಶ್ರೀ ಚಿಕನ್ ಸೆಂಟರ್ ಎಂಬ ಹೆಸರಿನ ಕೋಳಿಮಳಿಗೆ ಇರುತ್ತದೆ. ಸದರಿ ಮಳಿಗೆಯು 40 ಅಡಿಯ ರಸ್ತೆಯಲ್ಲಿರುವುದರಿಂದ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: UDD 105 MNJ 2008, Dated: 20-03-2015 ರಂತೆ Regulation 4.1.2 Sl.No.10 ಅಡಿಯಲ್ಲಿ ವಸತಿ ಪ್ರದೇಶದಲ್ಲೂ ಕೋಳಿ ಮಾಂಸ ಮಾರಾಟ ಮಳಿಗೆಗಳಿಗೆ ಉದ್ದಿಮೆ ಪರವಾನಗಿ ಪಡೆಯಲು ಅವಕಾಶವಿರುವುದರಿಂದ ಮಳಿಗೆಯ ಮಾಲೀಕರಾದ ಶ್ರೀ ಮಂಜುನಾಥ್.ಹೆಚ್.ಎಲ್. ಇವರ ಹೆಸರಿನಲ್ಲಿ ಬಿ.ಬಿ.ಎಂ.ಪಿ.ಯ ವತಿಯಿಂದ ಉದ್ದಿಮೆ ಪರವಾನಗಿಯನ್ನು 2018ರಲ್ಲಿ ಕೋಳಿ ಮಳಿಗೆಯ ನೆರೆ-ಹೊರೆಯಲ್ಲಿ ವಾಸಿಸುವವರ ಒಪ್ಪಿಗೆಯನ್ನು ಪಡೆದು ನೀಡಲಾಗಿದ್ದು, ಪ್ರತಿ ವರ್ಷ ನವೀಕರಿಸಲಾಗಿರುತ್ತದೆ.

ಸದರಿ ಕೋಳಿ ಮಳಿಗೆಗೆ ಭೇಟಿ ನೀಡಿ ಪರಿಶೀಲಿಸಿದಾಗ, ಮಳಿಗೆಯ ಆವರಣದಲ್ಲಿ ದುರ್ವಾಸನೆ ಇಲ್ಲದೇ ಸ್ವಚ್ಛವಾಗಿ ಹಾಗೂ ಶುಚಿಯಾಗಿರುವುದು ಕಂಡು ಬಂದಿರುತ್ತದೆ. ಮಳಿಗೆಯಲ್ಲಿ ಕೋಳಿಗಳಿಗೆ ಉತ್ತಮವಾದ ಗಾಳಿ ವಾತಾವರಣದ ಅವಶ್ಯಕತೆಯಿರುವ ಕಾರಣ ಪಂಜರವನ್ನು ಫುಟ್‌ಪಾತ್‌ನಲ್ಲಿ ಇರಿಸಲಾಗಿರುವ ವಿಷಯವನ್ನು ಮಳಿಗೆಯ ಮಾಲೀಕರು ತಿಳಿಸಿರುತ್ತಾರೆ. ಆದರೆ, ಮಳಿಗೆಯ ಒಳ ಭಾಗದಲ್ಲೂ ಸಹ ಉತ್ತಮವಾದ ಗಾಳಿ ಮತ್ತು ಬೆಳಕು ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕೋಳಿ ಪಂಜರಗಳನ್ನು ಮಳಿಗೆಯ ಒಳಗೆ ಇರಿಸಲು ಸೂಚಿಸಲಾಗಿರುತ್ತದೆ.

---

**ಸಂಖ್ಯೆ: ನಅಇ 65 ಬಿಬಿಎಲ್ 2022(ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ